MR. DEPUTY SPEAKER.—In view of the lengthy discussion and the statement made by the Hon'ble Revenue Minister, I am not giving my consent to the adjournment motion. We have discussed the issue fully.

ಶ್ರೀ ಕೆ. ಎಚ್ ಶ್ರೀನಿವಾಸ್.—ಅರ್ಜನ್‌ಮೆಂಟ್ ಮೋಷನ್ ನನ್ನ ಹೆಸರಿನಲ್ಲಿರುವುದರಿಂದ ನನಗೆ ಇನ್ನೊಂದು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಬೇಕು. ಮಾನ್ಯಮಂತ್ರಿಯವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಶಿವಮೊಗ್ಗದ ಒಂದನೇ ಜೋನ್‌ನಲ್ಲಿ ಹೊಸ ಕಂದಾಯಕ್ಕೆ ಬದಲು ಹಳೆಯ ಕಂದಾಯವನ್ನೇ ವಸೂಲಿ ಮಾಡುವಂತೆ ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ಆದೇಶ ಕಳುಹಿಸಿಕೊಡುತ್ತಿರಾ?

SRI. B. B. SAYANKA.—Sir, I rise to a point of order. When the Ruling has been given, there must be an end to the discussion.

MR. DEPUTY SPEAKER: —I uphold the point of Order.

CALLING ATTENTION TO A MATTER OF URGENT PUBLIC IMPORTANCE.

Regarding Perchase of Sugar Cane by Thungabhadra Sugar Co Shimoga

ಶ್ರೀ ಹಂಜಿ. ಶಿವಣ್ಣ.—ಸ್ವಾಮಿ, ನಾನು ಜರೂರಾದ ಸಾರ್ವಜನಿಕ ಪ್ರಾಮುಖ್ಯತೆ ವಿಚಾರವೊಂದನ್ನು ಎಂದರೆ ಶಿವಮೊಗ್ಗದಲ್ಲಿರುವ ತುಂಗಭದ್ರಾ ಸಕ್ಕರೆ ಕಂಪನಿಯವರು ಕಬ್ಬನ್ನು ಕೊಳ್ಳುವಲ್ಲಿ ಇರುವ ತಾರತಮ್ಯದ ವಿಚಾರವನ್ನು ಕೈಗಾರಿಕೆ, ವಾರ್ತಾ ಮತ್ತು ಪ್ರಸಾರ ಮಂತ್ರಿಗಳ ಗಮನಕ್ಕೆ ತರುತ್ತೇನೆ:—

ಶ್ರೀ ಎಂ ರಾಜಶೇಖರಮೂರ್ತಿ.—ಭಾರತ ಸರ್ಕಾರದ ೧೯೬೬ನೇ ಇಸವಿ ಜುಲೈ ೧೬ನೇ ದಿನಾಂಕದ ಜಿ. ಎಸ್. ಆರ್. ೧೧೨೬ನೆಯ ಅಧಿಸೂಚನೆಯೊಡನೆ ಓದಿಕೊಳ್ಳತಕ್ಕ ೧೯೬೬ನೇ ಇಸವಿಯ ಕಬ್ಬು ನಿಯಂತ್ರಣಾದೇಶದಿಂದ ವಹಿಸಿಕೊಟ್ಟಿರುವ ಅಧಿಕಾರಗಳನ್ನು ಪ್ರಯೋಗಿಸಿ ಮೈಸೂರು ಸರ್ಕಾರದವರು ೧೯೬೬ನೇ ಇಸವಿಯ ಕ್ರಷರುಗಳ ಲೈಸನ್ಸ್ ನೀಡಿಕೆ ಆದೇಶವನ್ನು ಹೊರಡಿಸಿರುತ್ತಾರೆ.

ಮೇಲ್ಕಂಡ ಆದೇಶದ ೩ನೇ ಖಂಡಕ್ಕೆ ಅನುಸಾರವಾಗಿ, ಯಾವನೇ ವ್ಯಕ್ತಿಯು, ಯಾವುದೇ ಮೀಸಲು ಪ್ರದೇಶದಲ್ಲಿ ಮತ್ತು ಅಂತಹ ಮೀಸಲು ಪ್ರದೇಶಗಳ ಎಲ್ಲೆಗಳಿಂದ ೨೦ ಮೈಲಿ ದೂರದೊಳಗಿರುವ ಯಾವುದೇ ಪ್ರದೇಶದಲ್ಲಿ ಒಬ್ಬ ಕಬ್ಬಿನ ಬೆಳೆಗಾರನಿಗೆ ಇಲ್ಲವೇ ಬೆಳೆಗಾರರ ಗುಂಪಿಗೆ ಸೇರಿದಲ್ಲದ ಪವರ್ ಕ್ರಷರ್ ಅಥವಾ "ಖಂಡಸಾರಿ ಯೂನಿಟ್" ಅಥವಾ ಕ್ರಷರನ್ನು, ಡೆಪ್ಯೂಟಿ ಕಮಿಷನರವರು ನೀಡಿದ ಲೈಸನ್ಸ್‌ನಲ್ಲಿರುವ ಷರತ್ತುಗಳ ಮೇರೆಗೆ ಮತ್ತು ಅವುಗಳಿಗನುಸಾರವಾಗಿ ಹೊರತು, ನಡೆಸತಕ್ಕದಲ್ಲ.

೧೯ನೇ ಆಗಸ್ಟ್ ೧೯೬೯ನೇ ದಿನಾಂಕದ ಸಿ. ಐ. ೯೭ ಡಿ. ಎಸ್. ಎಫ್. ೬೯ನೇ ಕ್ರಮಾಂಕದಲ್ಲಿ ಹೊರಡಿಸಿದ ೧೯೬೬ನೇ ಇಸವಿಯ ಮೈಸೂರು ಕಬ್ಬು (ಪಂಚಿಕೆ ವಿನಿಯಮನ) (ಶಿವಮೊಗ್ಗ) ಆದೇಶವು ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಯ ಕಾರ್ಯಕ್ಷೇತ್ರವನ್ನು ತಿಳಿಸಿದೆ, ಆ ದೇಶದ ೩ನೇ ಖಂಡದ (೧)ನೇ ಉಪಖಂಡದ ಮೇರೆಗೆ ಈ ಸಕ್ಕರೆ ಕಾರ್ಖಾನೆಯು ಆದೇಶದ ಅನುಸೂಚಿಯಲ್ಲಿ ಹೇಳಿರುವ ಪ್ರದೇಶದಿಂದ ಸಕ್ಕರೆಯನ್ನು ಪಡೆದುಕೊಳ್ಳತಕ್ಕದ್ದು ಈ ಆದೇಶವಲ್ಲಿ, ಈ ಮುಂದಿನ ತಾಲ್ಲೂಕುಗಳಲ್ಲಿರುವ ಕೆಲವು ಗ್ರಾಮಗಳನ್ನು ಮೀಸಲಿರಿಸಿದೆ.

(೧) ಶಿವಮೊಗ್ಗ ತಾಲ್ಲೂಕ್, (೨) ಹೊನ್ನಾಳಿ ತಾಲ್ಲೂಕ್:

(೩) ಶಿಕಾರಿಪುರ ತಾಲ್ಲೂಕ್; (೪) ಭದ್ರಾವತಿ ತಾಲ್ಲೂಕ್:

(ಶ್ರೀ ಎಂ. ರಾಜಶೇಖರಮೂರ್ತಿ)

ಮೀಸಲು ಪ್ರದೇಶದಲ್ಲಿ ಪ್ರತಿಯೊಬ್ಬ ಕಬ್ಬು ಬೆಳೆಗಾರನು ತಾನೇ ಆಗಲಿ, ಅಥವಾ ಆತನು ಮೀಸಲು ಪ್ರದೇಶದಲ್ಲಿ ನಡೆಯುವ ಕಬ್ಬು ಬೆಳೆಗಾರರ ಸಹಕಾರ ಸಂಘದ ಸದಸ್ಯನಾಗಿದ್ದರೆ, ಅಂತಹ ಸಂಘದ ಮೂಲಕ, ಬೆಳೆದ ಕಬ್ಬಿನ ಪೈಕಿ ಶೇಕಡ ೪೫ರಷ್ಟು ಕಬ್ಬನ್ನು ಕಾರ್ಖಾನೆಗೆ ಒದಗಿಸಬೇಕು.

ಕಾರ್ಖಾನೆಗೆ ಕಬ್ಬಿನ ಸರಬರಾಜು ನಿಯತವಾಗಿ ಬರುವಂತೆ ಖಚಿತಪಡಿಸಿಕೊಳ್ಳುವುದೇ ಈ ಪ್ರದೇಶವನ್ನು ಮೀಸಲಿರಿಸುವುದರ ಉದ್ದೇಶ. ಈ ನಾಲ್ಕು ತಾಲ್ಲೂಕ್‌ಗಳಲ್ಲಿ ಕಾರ್ಖಾನೆಯು ಬೇಡಿಕೆಯನ್ನು ಪೂರೈಸಲು ಸಾಕಷ್ಟು ಕಬ್ಬು ಬೆಳೆಯುವುದೆಂದು ಭಾವಿಸಲಾಗಿದೆ. ಹೆಚ್ಚಿಗೆ ಕಬ್ಬು ಬೇಕಾದ ಪಕ್ಷದಲ್ಲಿ ಮತ್ತು ಕಾರ್ಖಾನೆಯು ತರೀಕೆರೆ ತಾಲ್ಲೂಕ್‌ನಿಂದ ಕಬ್ಬು ಸರಬರಾಜನ್ನು ಪಡೆಯಬಯಸಿದರೆ, ಆಗ ಆ ತಾಲ್ಲೂಕನ್ನು ಸಹ ಮೀಸಲು ಪ್ರದೇಶದಲ್ಲಿ ಸೇರಿಸಿಕೊಳ್ಳಬಹುದು.

ಕಾರ್ಖಾನೆಗೆ (೩೦ ವರ್ಷದ) ಗೇಣಿಗೆ ಈ ಮುಂದಿನಂತೆ ಭೂಮಿ ಕೊಡಲಾಗುವುದು.

೧.	ಶಿವಮೊಗ್ಗ ಜಿಲ್ಲೆ	...	೬೫೮ ಎಕರೆ
೨.	ಚಿಕ್ಕಮಗಳೂರು ಜಿಲ್ಲೆ	...	೮೪೪ ಎಕರೆ
			೧೫೦೨ ಎಕರೆ

ಗೇಣಿ ಅವಧಿ ಮುಗಿಯುವವರೆಗೆ ಏನೊಂದು ಕ್ರಮ ಕೈಕೊಳ್ಳಲು ಸಾಧ್ಯವಿಲ್ಲ.

ತರೀಕೆರೆಗೂ ಭದ್ರಾವತಿಗೂ ನಡುವೆ ಹೊಸದೊಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವುದರ ವಿಚಾರವಾಗಿ ಹೇಳುವುದಾದರೆ, ಈ ಸೂಚನೆ ವ್ಯಕ್ತಿಗಳಿಂದಾಗಲಿ ಯಾವುದೇ ಸಹಕಾರಿ ಸಂಘದಿಂದಾಗಲಿ ಬಂದ ಪಕ್ಷದಲ್ಲಿ ಅಂಥಾ ಸೂಚನೆಯನ್ನು ಸರ್ಕಾರದವರು ಪರಿಶೀಲಿಸಿ ಅದು ಕಾರ್ಯಸಾಧ್ಯವೆಂದು ಕಂಡು ಬಂದರೆ, ಆದನ್ನು ಲೈಸನ್ಸು ನೀಡಿಕೆಗಾಗಿ ಭಾರತ ಸರ್ಕಾರಕ್ಕೆ ಶಿಫಾರಸು ಮಾಡುವುದು. ಸರ್ಕಾರದವರು ಸದ್ಯಕ್ಕೆ ರಾಜ್ಯದಲ್ಲಿ ಯಾವ ಸಕ್ಕರೆ ಕಾರ್ಖಾನೆಯನ್ನೂ ತಾವಾಗಿಯೇ ಸ್ಥಾಪಿಸುವುದಿಲ್ಲ.

ಶ್ರೀ, ಹಂಜಿ ಶಿವಣ್ಣ—ತಾವು ಕನ್ನಡದಲ್ಲಿ ಉತ್ತರ ಕೊಟ್ಟಿರುವುದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಶಿವಮೊಗ್ಗ ಸಕ್ಕರೆ ಕಾರ್ಖಾನೆಯವರಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ೬೫೮ ಎಕರೆಯನ್ನು ಮತ್ತು ಚಿಕ್ಕ-ಮಗಳೂರು ಜಿಲ್ಲೆಯಲ್ಲಿ ೮೪೪ ಎಕರೆಯನ್ನು ಉಡುಗೊರೆಯಾಗಿ ಕೊಟ್ಟಿದ್ದೀರಿ. ಹಿಂದೆ ರಾಜಮಹಾರಾಜರ ಕಾಲದಲ್ಲಿ ಯಾವರೀತಿ ಜಮೀನನ್ನು ಉಡುಗೊರೆಯಾಗಿ ಕೊಡುತ್ತಿದ್ದರೋ ಅದೇ ರೀತಿ ತಾವು ಸಹ ೧೫೦೨ ಎಕರೆಯಷ್ಟು ಉತ್ಕೃಷ್ಟವಾದ ನೀರಾವರಿ ಜಮೀನನ್ನು ಈ ಕಾರ್ಖಾನೆಗೆ ಉಡುಗೊರೆಯಾಗಿ ಕೊಟ್ಟಿದ್ದೀರಿ. ಮತ್ತು ಅವರು ಒಂದುವರ್ಷಕ್ಕೆ ಎರಡುಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ಈಗ ತಾವು ಯಾವುದೇ ಮಿಾಸಲು ಪ್ರದೇಶದಲ್ಲಿ ಮತ್ತು ಅಂತಹ ಮಿಾಸಲು ಪ್ರದೇಶಗಳ ಎಲ್ಲೆಗಳಿಂದ ೨೦ ಮೈಲಿ ದೂರದೊಳಗಿರುವ ಯಾವುದೇ ಪ್ರದೇಶದಲ್ಲಿ ಒಬ್ಬ ಕಬ್ಬಿನ ಬೆಳೆಗಾರನಿಗೆ ಕ್ರಷರ್ ಅನ್ನು ಹಾಕುವುದಕ್ಕೆ ಜಿಲ್ಲಾಧಿಕಾರಿಗಳಿಂದ ಲೈಸೆನ್ಸ್ ಪಡೆಯಬಹುದು ಎಂದು ಹೇಳಿದ್ದೀರಿ, ಮಿಾಸಲು ಪ್ರದೇಶಗಳ ಎಲ್ಲೆಗಳಿಂದ ೨೦ ಮೈಲಿ ಒಳಗಡೆ ಇರತಕ್ಕಂಥ ಕಬ್ಬು ಬೆಳೆಗಾರನು ಬೆಳೆಯತಕ್ಕಂಥ ಕಬ್ಬನ್ನು ಸಕ್ಕರೆ ಕಾರ್ಖಾನೆಯವರು ತೆಗೆದುಕೊಳ್ಳದಿದ್ದರೆ ಕ್ಷೇತ್ರೊಂದರೆಯಾಗುತ್ತದೆ ಮತ್ತು ತರೀಕೆರೆಗೂ ಭದ್ರಾವತಿಗೂ ನಡುವೆ ಯಾರದರೂ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಾದರೆ ಅದಕ್ಕೆ ಮಂಜೂರಾತಿಯನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರದವರಿಗೆ ಶಿಫಾರಸ್ಸು ಮಾಡುತ್ತೇವೆ ಎಂದು ಹೇಳಿದ್ದೀರಿ ಸಂತೋಷ. ಕಳೆದ ವರ್ಷ ಒಂದು ಟನ್ ಕಬ್ಬಿಗೆ ೧೧೪ ರೂಪಾಯಿಗಳಂತೆ ಶಿವಮೊಗ್ಗಾದ್ಯರುವ ತುಂಗಭದ್ರಾ ಸಕ್ಕರೆ ಕಂಪನಿಯವರು ಕೊಂಡಿದ್ದಾರೆ. ಈ ವರ್ಷ ಒಂದು ಟನ್ನಿಗೆ ೮೫ ರೂಪಾಯಿಗಳಂತೆ ತೆಗೆದುಕೊಂಡಿದ್ದಾರೆ. ಈ ವರ್ಷ ಇಂಡಿಯಾ ಸರ್ಕಾರದವರು ಕಬ್ಬನ್ನು ತೆಗೆದುಕೊಳ್ಳುವ ಬಗ್ಗೆ ಒಂದು ರೇಟನ್ನು ನಿಗದಿ ಮಾಡಿದ್ದಾರೆ, ಆದರೆ ಆ ಸಕ್ಕರೆ ಕಾರ್ಖಾನೆಯವರು ಆ ರೇಟನ್ನು ಕೊಡದೆ ಕಡಿಮೆ ದರ ಕೊಟ್ಟು ಕಬ್ಬನ್ನು ಕೊಳ್ಳುವುದರಲ್ಲಿ ತಾರತಮ್ಯ ಮಾಡುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈಗ ತಾವು ತರೀಕೆರೆಗೂ ಭದ್ರಾವತಿಗೂ ನಡುವೆ ಹೊಸದಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಯಾವುದೇ ಸಹಕಾರ ಸಂಘದಿಂದಾಗಲೀ ಸೂಚನೆ ಬಂದ ಪಕ್ಷದಲ್ಲಿ ಅಂಥಾ ಸೂಚನೆಯನ್ನು ಸರ್ಕಾರದವರು ಪರಿಶೀಲಿಸಿ ಲೈಸೆನ್ಸ್ ನೀಡಿಕೆಗಾಗಿ ಶಿಫಾರಸ್ಸು ಮಾಡುತ್ತೇವೆ

ಎಂದು ಹೇಳಿದ್ದೀರಿ, ಹಾಗಾದರೆ ಈಗ ತಾವೇನು ತುಂಗಭದ್ರಾ ಸಕ್ಕರೆ ಕಂಪನಿಯವರಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ೮೪೪ ಎಕರೆ ಜಮೀನನ್ನು ಏನು ಕೊಟ್ಟಿದ್ದೀರಿ ಆ ಜಮೀನನ್ನು ನಮಗೆ ಕೊಡಿಸುವುದಾದರೆ ನಾವು ಒಂದು ಸಹಕಾರ ಸಂಘದ ಮುಖಾಂತರ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಇದಕ್ಕೆ ತಾವೇನು ಉತ್ತರ ಹೇಳುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ:—ಈಗಾಗಲೇ ಆ ಜಮೀನನ್ನು ಆ ಸಕ್ಕರೆ ಕಂಪನಿಯವರಿಗೆ ೩೦ ವರ್ಷಗಳ ಲೀಜಿಗೆ ಕೊಟ್ಟಿದೆ. ಆ ಅವಧಿ ಮುಗಿದ ಮೇಲೆ ಈ ವಿಚಾರವನ್ನು ಯೋಚನೆ ಮಾಡಬಹುದು.

PAPERSLAID ON THE TABLE.

SRI B. RACHAIAH. (Minister for Agriculture):—Sir I beg to lay on the Table. on behalf of the Hon. Minister for Development

" The Mysore Agricultural Produce Marketing (Regulation)

(Amendment) Rules, 1970". Vide Notification No. G. S. R. 44 Dated 3rd February 1970 issued under the Mysore Agricultural Procedure Marketing Regulation Act 1966.

SRI H. SIDDAVEERAPPA:—Sir, I rise to a point of order. This is a very important matter and it stands in the name of Sri P. M. Nadgouda. We have our own objections to raise on this issue.

MR. DEPUTY SPEAKER:—Laying of papers is purely formal procedure.

SRI H. SIDDAVEERAPPA:—I take objection to the very laying of these rules on the Table of the House.

SRI K. H. SRINIVASA:— Sir, I may be permitted to seek one clarification from the Hon. Revenue Minister. I want to know whether instructions have been issued to the Deputy Commissioner in Shimoga Zone to demand only the old rates?

MR. DEPUTY SPEAKER:—That mattr is already over. I will permit The Hon Member to refer to it afterwards. Now, let the papers be laid on the Table.

SRI H. SIDDAVEERAPPA:— Sir, I suggest that this matter be brought up tomorrow.

SRI K. H. PATIL:— Sir, I rise to a point of order. Sir, rule 116/(1 of rules of theprocedure reads thus."116 (1)Where, a regulation sub-rule) rule bye-law, etc,. framed in pursuance of the Constitution or of the legislative.